**ಓ.ಎಸ್. ನಂ. 156/2015 ಡಿ.ಡಬ್ಲೂ-1 ಹೆಸರು - ಕೆ.ಎಸ್. ಮಂಜುನಾಥ**

**ಸಾಕ್ಷಿಯನ್ನು ದಿನಾಂಕಃ 17/02/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಶ್ರೀ. ಎಂ.ಎಂ. ಪ್ರತಿವಾದಿ ಪರ ವಕೀಲರಿಂದಃ-**

ಅಸಲು ದಾವಾ ಸಂಖ್ಯೆ 79/2015 ರ ವಾದ ಪತ್ರ, ಪ್ರತಿವಾದ ಪತ್ರ, ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಡಿ-7 ರಿಂದ 10 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ. ಕೆ.ಎಸ್.ಕೆ. ವಾದಿ ಪರ ವಕೀಲರಿಂದಃ-**

ಅಸಲು ದಾವಾ ಸಂಖ್ಯೆ 79/2015 ರಲ್ಲಿ ನಾನು ಪಕ್ಷಗಾರನಲ್ಲ ಎಂದರೆ ಸರಿಯಲ್ಲ. ವಾದಿ ಕೂಡ ಸದರಿ ದಾವೆಯಲ್ಲಿ ಪಕ್ಷಗಾರ ಎಂದರೆ ಇರಬಹುದು. ಪಚ್ಚಯ್ಯ ಮತ್ತು ದೊಡ್ಡೇಗೌಡ ಅಣ್ಣ ತಮ್ಮಂದಿರು ಎಂದರೆ ಸರಿ. ದಾವಾ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ 4 ಎಕರೆ ಎಂದು ತೋರಿಸಲು ನಾನು ದಾಖಲಾತಿ ಹಾಜರುಪಡಿಸಿದ್ದೇನೆ. ದಾವಾ ಸರ್ವೆ ನಂಬರ್ ನಲ್ಲಿ 20 ಗುಂಟೆ ಹೊರತುಪಡಿಸಿ ಉಳಿದ 3 ಎಕರೆ 20 ಗುಂಟೆ ನನ್ನ ತಂದೆ ಶಿವಣ್ಣ ಮತ್ತು ಅವರ ಸಹೋದರರ ಪಿತ್ರಾರ್ಜಿತ ಸ್ವತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ನಲ್ಲಿ 2 ಎಕರೆ 2 ಗುಂಟೆ ಜಮೀನನ್ನು ಕೈಗಾರಿಕಾಭಿವೃದ್ಧಿಗೆ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದಾರೆ. ನನ್ನ ತಂದೆಯ ಪಾಲಿಗೆ ದಾವಾ ಸರ್ವೆ ನಂಬರ್ ನಲ್ಲಿ ಭಾಗ ಬಂದಿದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ಸದರಿ ವಿಸ್ತೀರ್ಣದ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. 1 ಎಕರೆಯಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪ ವಿಭಾಗ ಮಾಡಿಕೊಂಡು ಖಾತೆ ಮಾಡಿಸಿಕೊಂಡಿದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ವಾದಿಯ ಸ್ವಾಧೀನದಲ್ಲಿ 2 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 2 ಎಕರೆ 20 ಗುಂಟೆ ಕೈಗಾರಿಕಾಭಿವೃದ್ಧಿಗೆ ಸ್ವಾಧೀನವಾಗಿದೆ ಎಂದು ಹೇಳಿರುವುದು ತಪ್ಪು. ಸಾಕ್ಷಿ ಮುಂದುವರೆದು 3 ಎಕರೆ ಸ್ವಾಧೀನವಾಗಿದೆ ಎಂದು ನುಡಿಯುತ್ತಾರೆ. 3 ಎಕರೆ ಸ್ವಾಧೀನವಾಗಿದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ವಾದಿ ಮತ್ತು ಅವರ ಕುಟುಂಬ ಸದಸ್ಯರು ಸೇರಿಕೊಂಡು ಬಿ.ಸುದಾಕರ್ ಪೈ ಎನ್ನುವವರಿಗೆ ಸರ್ವೆ ನಂಬರ್ 516 ಸ್ವತ್ತಿಗೆ ಸಂಬಂಧಪಟ್ಟಂತೆ ಜಿ.ಪಿ.ಎ ಬರೆದುಕೊಟ್ಟಿದ್ದಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನಗೆ ಸೇರಿದ 10 ಗುಂಟೆ ಜಮೀನನ್ನು

ಸೇರಿಸಿ ವಾದಿ ಮತ್ತು ಅವರ ಕುಟುಂಬದವರು ಮಾರಾಟ ಮಾಡಿರುತ್ತಾರೆ ಎಂದು ಹೇಳಿರುವುದು ಸುಳ್ಳಿನಿಂದ ಕೂಡಿದೆ. ದಿನಾಂಕ 05.11.2007 ರ ದಿನಾಂಕಕ್ಕೆ ನನ್ನ ಹೆಸರಿನಲ್ಲಿ ಸರ್ವೆ ನಂಬರ್ 516 ರ ದಾಖಲೆ ಇತ್ತು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸರ್ವೆ ನಂಬರ್ 516 ರಲ್ಲಿ ನನ್ನ ತಂದೆ, ಚಿಕ್ಕಪ್ಪ ಮತ್ತು ವಾದಿಯ ತಂದೆಗೆ ಸೇರಿದ್ದ 3 ಎಕರೆ 20 ಗುಂಟೆಯನ್ನು ಸ್ವಾಧೀನವಾಗಿದೆ ಎಂದರೆ ಸಾಕ್ಷಿಯು 4 ಎಕರೆ ಸ್ವಾಧೀನವಾಗಿದೆ ಎಂದು ನುಡಿಯುತ್ತಾರೆ. ಸ್ವಾಧೀನವಾದ ನಂತರ ವಾದಿ ತನ್ನ 20 ಗುಂಟೆ ಜಮೀನಿಗೆ ಸಂಬಂಧಪಟ್ಟ ಕ್ರಯ ಪತ್ರವನ್ನು ಕೆ.ಐ.ಎ.ಡಿ.ಬಿ. ಗೆ ಹಾಜರುಪಡಿಸಿದ ನಂತರ ಅವರು ಸದರಿ 20 ಗುಂಟೆಯ ಸ್ವಾಧೀನವನ್ನು ಕೈಬಿಟ್ಟರು ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ 20 ಗುಂಟೆಗೆ ವಾದಿಯೇ ಮಾಲೀಕರು ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನದು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**